ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್
ತನ್ನ **ಕಲಾ ಶಿಕ್ಷಣ** ಕಾರ್ಯಕ್ರಮದ ಅಡಿಯಲ್ಲಿ
ಭಾರತದಲ್ಲಿನ ಸರ್ಕಾರಿ ಅನುದಾನಿತ ಮತ್ತು ಲಾಭರಹಿತ ಶಾಲೆಗಳಿಂದ
ಕಲಾ-ಸಮನ್ವಿತ ಯೋಜನೆಗಳಿಗಾಗಿ
ಪ್ರಸ್ತಾಪನೆಗಳನ್ನು ಆಹ್ವಾನಿಸುತ್ತದೆ
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: December 15, 2026

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐ ಎಫ್ ಏ) ಕಲಾ ಶಿಕ್ಷಣದ ಮೂಲಕ ಬೋಧನೆ ಮತ್ತು ಕಲಿಕೆಯನ್ನು ಬಲಪಡಿಸಲು ಭಾರತದಾದ್ಯಂತ ಮಹಾನಗರಗಳ ಹೊರತಾದ ಪ್ರದೇಶಗಳಲ್ಲಿ ಇರುವ ಸರ್ಕಾರಿ ಅನುದಾನಿತ ಮತ್ತು ಲಾಭರಹಿತ ಶಾಲೆಗಳಲ್ಲಿ ಕಲಾ-ಸಮನ್ವಿತ ಯೋಜನೆಗಳನ್ನು ಅನುಷ್ಠಾನಗೊಳಿಸಲು ಬಯಸುತ್ತದೆ.

ಕಲಿ ಕಲಿಸು ಕಲಾ ಶಿಕ್ಷಣ ಕಾರ್ಯಕ್ರಮವು ಪಠ್ಯಕ್ರಮ ಆಧಾರಿತ ಬೋಧನಾ ವಿಧಾನಗಳಿಗಾಗಿ ವಿವಿಧ ಕಲಾ ಪ್ರಕಾರಗಳನ್ನು ಬಳಸುವ ಮೂಲಕ ಶಾಲೆಗಳಲ್ಲಿ ಕಲಿಕೆಯನ್ನು ಆಕರ್ಷಕ ಮತ್ತು ಆನಂದದಾಯಕ ಅನುಭವವನ್ನಾಗಿ ಮಾಡುವ ಗುರಿಯನ್ನು ಹೊಂದಿದೆ.

ಈ ಆಲೋಚನೆಗೆ ಅನುಗುಣವಾಗಿ, ಕಲಾ-ಸಮನ್ವಿತ ಬೋಧನಾ ವಿಧಾನಗಳಿಗೆ ದೃಢವಾದ ಅಡಿಪಾಯವನ್ನು ನಿರ್ಮಿಸುವ ಮತ್ತು ವಿದ್ಯಾರ್ಥಿಗಳಲ್ಲಿ ಕುತೂಹಲ ಹಾಗೂ ಸೃಜನಶೀಲತೆಯನ್ನು ಪ್ರೋತ್ಸಾಹಿಸುವ ಗುರಿಯನ್ನು ಹೊಂದಿರುವ ಸರ್ಕಾರಿ ಅನುದಾನಿತ ಮತ್ತು ಲಾಭರಹಿತ ಶಾಲೆಗಳಿಂದ ಐ ಎಫ್ ಏ ಯೋಜನೆಗಳ ಪ್ರಸ್ತಾಪನೆಗಳನ್ನು ಆಹ್ವಾನಿಸುತ್ತದೆ.

ಹಿಂದಿನ ವರ್ಷಗಳ ನಮ್ಮ ಕೆಲವು ಯೋಜನೆಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಇಲ್ಲಿ ಕ್ಲಿಕ್ ಮಾಡಿ.

ಯೋಜನೆಗಳ ವ್ಯಾಪ್ತಿ:

ಈ ಯೋಜನೆಗಳು ಈ ಕೆಳಗಿನ ಯಾವುದೇ ಒಂದು ಅಥವಾ ಹೆಚ್ಚಿನ ಉದ್ದೇಶಗಳನ್ನು ಒಳಗೊಂಡಿರಬಹುದು:

- ಸ್ಥಳೀಯ ಕಲಾ ಪ್ರಕಾರಗಳು ಮತ್ತು ಸಾಂಸ್ಕೃತಿಕ ಆಚರಣೆಗಳನ್ನು ತರಗತಿಯ ಕಲಿಕೆ ಮತ್ತು ಬೋಧನೆಯೊಂದಿಗೆ ಸಮನ್ವಯಗೊಳಿಸುವುದು
- ಎಲ್ಲಾ ವಿಷಯಗಳ ಕಲಿಕೆ ಮತ್ತು ಬೋಧನಾ ಪ್ರಕ್ರಿಯೆಗಳಲ್ಲಿ ಕಲೆಯನ್ನು ಸಮನ್ವಯಗೊಳಿಸುವುದು
- ವಿದ್ಯಾರ್ಥಿಗಳ ಜೀವನದ ಅನುಭವಗಳನ್ನು ತರಗತಿಯ ಕಲಿಕೆಗೆ ಸೇರಿಸುವುದು
- ಸ್ಥಳೀಯ ಕಲಾವಿದರು ಮತ್ತು ಸಮುದಾಯದ ಸಂಪನ್ಮೂಲಗಳೊಂದಿಗೆ ಕೆಲಸ ಮಾಡುವುದು

ಯೋಜನೆಯ ಅವಧಿ: ಕನಿಷ್ಠ **ಒಂದು ವರ್ಷ**ದಿಂದ ಗರಿಷ್ಠ **ಒಂದು ವರ್ಷ ಆರು ತಿಂಗಳು**ಗಳವರೆಗೆ

ಆಯವ್ಯಯ (ಬಜೆಟ್): ಗರಿಷ್ಠ **ರೂ. 4,00,000/-** ಗಳವರೆಗೆ (ನಾಲ್ಕು ಲಕ್ಷ ರೂಪಾಯಿಗಳು)

ಯಾರು ಅರ್ಜಿ ಸಲ್ಲಿಸಬಹುದು?

ಮಹಾನಗರಗಳ ಹೊರತಾದ ಪ್ರದೇಶಗಳಲ್ಲಿ ಇರುವ ಸರ್ಕಾರಿ ಅನುದಾನಿತ ಅಥವಾ ಲಾಭರಹಿತ ಶಾಲೆಗಳು. ಸಂಸ್ಥೆಯು ಸ್ಥಳೀಯ ಭಾಷೆಗಳೊಂದಿಗೆ ಕೆಲಸ ಮಾಡುತ್ತಿರಬೇಕು ಮತ್ತು ಕಲೆ ಹಾಗೂ ಸಂಸ್ಕೃತಿ, ಬೋಧನೆ ಮತ್ತು ಕಲಿಕೆಯ ಅವಿಭಾಜ್ಯ ಅಂಗಗಳಾಗಿವೆ ಎಂದು ನಂಬಿರಬೇಕು.

ಅರ್ಹತೆ:

- ಸೊಸೈಟೀಸ್ ನೋಂದಣಿ ಕಾಯಿದೆ 1860 / ಇಂಡಿಯನ್ ಟ್ರಸ್ಟ್ ಕಾಯಿದೆ 1882 ರ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಸಂಸ್ಥೆಯು ಶಾಲೆಯ ಮಾಲೀಕತ್ವ ಹೊಂದಿರಬೇಕು / ಶಾಲೆಯನ್ನು ನಡೆಸುತ್ತಿರಬೇಕು
- ಇದು ಕನಿಷ್ಠ ಮೂರು ವರ್ಷಗಳಿಂದ ಅಸ್ತಿತ್ವದಲ್ಲಿರಬೇಕು
- ಇದು ಕನಿಷ್ಠ ಎರಡು ವರ್ಷಗಳ ಲೆಕ್ಕಪರಿಶೋಧಿತ ಖಾತೆಗಳ ವಿವರಣೆಯನ್ನು (ಆಡಿಟೆಡ್ ಸ್ಟೇಟ್‌ಮೆಂಟ್) ಹೊಂದಿರಬೇಕು
- ಇದು ಮಾನ್ಯವಾದ ಶಾಶ್ವತ ಖಾತೆ ಸಂಖ್ಯೆಯನ್ನು (PAN) ಹೊಂದಿರಬೇಕು

ಅರ್ಜಿ ಸಲ್ಲಿಸಲು ಮಾರ್ಗಸೂಚಿಗಳು:

ನಿಮ್ಮ ಪ್ರಸ್ತಾಪನೆಯನ್ನು ಇಂಗ್ಲಿಷ್ ಸೇರಿದಂತೆ ಯಾವುದೇ ಭಾರತೀಯ ಭಾಷೆಯಲ್ಲಿ ಬರೆಯಬಹುದು. ಇಂಗ್ಲಿಷ್ ಹೊರತುಪಡಿಸಿ ಇತರ ಭಾರತೀಯ ಭಾಷೆಗಳಲ್ಲಿನ ಯೋಜನೆಗಳನ್ನು ಐ ಎಫ್ ಏ ಪ್ರೋತ್ಸಾಹಿಸುತ್ತದೆ.

ನಿಮ್ಮ ಅಂತಿಮ ಪ್ರಸ್ತಾಪನೆಯು ಇವುಗಳನ್ನು ಹೊಂದಿರಬೇಕು:

- ಯೋಜನೆಯ ಶೀರ್ಷಿಕೆ
- ಶಾಲೆಯ ಧ್ಯೇಯ/ದೃಷ್ಟಿಕೋನ/ಸಂಕ್ಷಿಪ್ತ ಪರಿಚಯ
- ವಿದ್ಯಾರ್ಥಿಗಳ ಸಾಮಾಜಿಕ-ಸಾಂಸ್ಕೃತಿಕ ಹಿನ್ನೆಲೆ
- ಪ್ರಸ್ತಾಪಿತ ಯೋಜನೆಯ ಉದ್ದೇಶಗಳು
- ಕಾರ್ಯವಿಧಾನ ಮತ್ತು ವಿವರವಾದ ಕಾರ್ಯಯೋಜನೆ
- ಯೋಜನೆಯ ಭಾಗವಾಗುವ ಸಂಪನ್ಮೂಲ ವ್ಯಕ್ತಿಗಳ ವಿವರಗಳು
- ಯೋಜನೆಯ ಮೌಲ್ಯಮಾಪನ ಪ್ರಕ್ರಿಯೆ
- ಯೋಜನೆಯಿಂದ ನಿರೀಕ್ಷಿತ ಫಲಿತಾಂಶಗಳು
- ಬಜೆಟ್‌ನ ವಿವರವಾದ ವಿಂಗಡಣೆ
- ಆಯವ್ಯಯದ (ಬಜೆಟ್) ವಿಸ್ತೃತ ವಿವರಣೆ

ಜೊತೆಯಲ್ಲಿ ಲಗತ್ತಿಸಬೇಕಾದ ದಾಖಲೆಗಳು:

- ಟ್ರಸ್ಟ್ ಡೀಡ್ / ಮೆಮೊರಾಂಡಮ್ ಆಫ್ ಅಸೋಸಿಯೇಷನ್‌ನ ಪ್ರತಿ
- ಪ್ರಸ್ತುತ ಧರ್ಮದರ್ಶಿಗಳು (ಟ್ರಸ್ಟಿಗಳು)/ಸದಸ್ಯರ ಪಟ್ಟಿ ಮತ್ತು ವೈಯುಕ್ತಿಕ ಪರಿಚಯ(ಪ್ರೊಫೈಲ್)
- 12A / ಸೊಸೈಟಿ ಕಾಯಿದೆಯಡಿಯಲ್ಲಿ ನೋಂದಣಿಯ ಪ್ರತಿ
- ಕನಿಷ್ಠ ಕಳೆದ ಎರಡು ವರ್ಷಗಳ ಆಡಿಟರ್ ವರದಿ/ಆಡಿಟ್ ಮಾಡಿದ ಲೆಕ್ಕಪತ್ರಗಳ ವಿವರಣೆ
- ಸಂಸ್ಥೆಯ PAN ಕಾರ್ಡ್‌ನ ಪ್ರತಿ
- ಹಿಂದಿನ ಅಥವಾ ಪ್ರಸ್ತುತ ಕಲಾ ಶಿಕ್ಷಣ ಚಟುವಟಿಕೆಗಳ ವಿವರಗಳು (ಏನಾದರೂ ಇದ್ದರೆ)

ಎಲ್ಲಾ ಬೆಂಬಲಿತ ದಾಖಲೆಗಳೊಂದಿಗೆ ಅಂತಿಮ ಪ್ರಸ್ತಾಪನೆಯನ್ನು **December 15, 2026** ರಂದು ಅಥವಾ ಅದಕ್ಕೂ ಮೊದಲು 25 MB ಮೀರದ ಒಂದೇ ಇಮೇಲ್‌ನಲ್ಲಿ ಆನ್‌ಲೈನ್‌ನಲ್ಲಿ deepak@indiaifa.org ಗೆ ಸಲ್ಲಿಸಬೇಕು.
Subject line: IFA National Schools 2026-27 Proposal

ಅಪೂರ್ಣ ಪ್ರಸ್ತಾಪನೆಗಳು ಮತ್ತು ಅರ್ಹತಾ ಮಾನದಂಡಗಳ ವ್ಯಾಪ್ತಿಗೆ ಬಾರದಿರುವ ಅರ್ಜಿದಾರರ ಪ್ರಸ್ತಾಪನೆಗಳನ್ನು ತಿರಸ್ಕರಿಸಲಾಗುವುದು ಎಂಬುದನ್ನು ದಯವಿಟ್ಟು ಗಮನಿಸಿ.

ಆಯ್ಕೆ ಪ್ರಕ್ರಿಯೆ: ಆಯ್ಕೆಯಾದ ಪ್ರಸ್ತಾಪನೆಗಳನ್ನು ಬಾಹ್ಯ ಸಮಿತಿಯು ಮೌಲ್ಯಮಾಪನ ಮಾಡುತ್ತದೆ ಮತ್ತು ಅರ್ಜಿದಾರರು ತಮ್ಮ ಯೋಜನೆಯ ಪರಿಕಲ್ಪನೆಯನ್ನು ಸಮಿತಿಯ ಮುಂದೆ ಪ್ರಸ್ತುತಪಡಿಸಬೇಕಾಗುತ್ತದೆ. ಯೋಜನೆಗಳ ಆಯ್ಕೆಯ ಕುರಿತು ಐ ಫ್ ಏ ನಿರ್ಧಾರವೇ ಅಂತಿಮವಾಗಿರುತ್ತದೆ.

ಆಯ್ಕೆಯಾದ ಎಲ್ಲಾ ಯೋಜನೆಗಳನ್ನು ಐ ಎಫ್ ಏ ಅನುಷ್ಠಾನಗೊಳಿಸುತ್ತದೆ.

ಪ್ರಮುಖ ದಿನಾಂಕಗಳು:

- ಅಂತಿಮ ಪ್ರಸ್ತಾಪನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **December 15, 2026**
- ಅನುಷ್ಠಾನಕ್ಕೆ ಆಯ್ಕೆಯಾದ ಯೋಜನೆಗಳನ್ನು **ಜನವರಿ 2027**ರಲ್ಲಿ ಘೋಷಿಸಲಾಗುವುದು

ಐ ಎಫ್ ಏ ಮಕ್ಕಳು ಮತ್ತು ಯುವಜನತೆಯನ್ನು ಬೆಂಬಲಿಸುವ, ಗೌರವಿಸುವ ಮತ್ತು ರಕ್ಷಿಸುವ ಸುರಕ್ಷಿತ ವಾತಾವರಣವನ್ನು ನಿರ್ಮಿಸಲು ಬದ್ಧವಾಗಿದೆ ಎಂಬುದನ್ನು ದಯವಿಟ್ಟು ಗಮನಿಸಿ. ಅರ್ಜಿದಾರರು ಇದಕ್ಕೆ ಬದ್ಧರಾಗಿರಬೇಕು ಮತ್ತು ಅದನ್ನು ಎಲ್ಲಾ ಸಮಯದಲ್ಲೂ ಎತ್ತಿಹಿಡಿಯಬೇಕು.